# ಗಣಿಗಾರಿಕೆ ಮೇಲೆ ಏಕಸ್ವಾಮ್ಯ: ಸಿಎಂ ಇಚ್ಛಾಶಕ್ತಿ ಪ್ರದರ್ಶಿಸುವರೇ?

ಮುಖ್ಯಮಂತ್ರಿ ಹುದ್ದೆಯಂತಹ ಉನ್ನತ ಜಾಗದಲ್ಲಿ ಕುಳಿತವರಿಗೆ ಇಚ್ಚಾಶಕ್ತಿ ಇದ್ದರೆ ದೊಡ್ಡ ದೊಡ್ಡ ಪವಾಡಗಳನ್ನೇ ಮಾಡಬಹುದು.

ಈ ವಿಷಯ ಬಂದಾಗ ದೇವರಾಜ ಅರಸರು ಜಾರಿಗೆ ತಂದ ಭೂ ಸುಧಾರಣಾ ಕಾಯ್ದೆ,ಎಸ್.ಎಂ.ಕೃಷ್ಣ ಪಾನೀಯ ನಿಗಮ ಸ್ಥಾಪಿಸಿದ ಬೆಳವಣಿಗೆ ಹೀಗೆ ಹಲವು ಮಹತ್ವದ ಬದಲಾವಣೆಗಳನ್ನು ಉಲ್ಲೇಖಿಸಬಹುದು.

ಅಂದ ಹಾಗೆ ಕರ್ನಾಟಕದಲ್ಲಿ ಪಾನೀಯ ನಿಗಮದ ಸ್ಥಾಪನೆಗೆ ಪ್ರೇರಣೆ ಒದಗಿಸಿದ ಘಟನೆಯ ಬಗ್ಗೆ ಬಹುತೇಕ ಜನರಿಗೆ ಗೊತ್ತಿಲ್ಲ.ಪಾನೀಯ ನಿಗಮ ಸ್ಥಾಪನೆ ಆಗುವವರೆಗೆ ಅಬಕಾರಿ ಬಾಬ್ತಿನಿಂದ ರಾಜ್ಯದ ಬೊಕ್ಕಸಕ್ಕೆ ಸುಮಾರು ಎರಡು ಸಾವಿರ ಕೋಟಿ ರೂಗಳಷ್ಟು ಆದಾಯ ಬರುತ್ತಿತ್ತು.

ಇಂತಹ ಕಾಲಘಟ್ಟದಲ್ಲಿ ಸಿಎಂ ಆದ ಎಸ್.ಎಂ.ಕೃಷ್ಣ ಒಂದು ಸಲ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಮಾಜೀ ಸಿಎಂ ರಾಮಕೃಷ್ಣ ಹೆಗಡೆ ಅವರ ಆರೋಗ್ಯ ವಿಚಾರಿಸಲು ಹೋದರು.ಹಾಗೆ ಕೃಷ್ಣ ಆಸ್ಪತ್ರೆಗೆ ಹೋದ ಕಾಲದಲ್ಲಿ ರಾಮಕೃಷ್ಣ ಹೆಗಡೆ ವಕೀಲರೊಬ್ಬರನ್ನು ಕರೆಸಿ ಮಾತನಾಡುತ್ತಿದ್ದರು.

ಈ ಸಂದರ್ಭದಲ್ಲಿ ರಾಮಕೃಷ್ಣ ಹೆಗಡೆ ಅವರನ್ನು ಭೇಟಿ ಮಾಡಿದ ಕೃಷ್ಣ,ಯಾವ ಕಾರಣಕ್ಕಾಗಿ ವಕೀಲರನ್ನು ಕರೆಸಿದ್ದೀರಿ?ಅಂತ ಕೇಳಿದರು.ಅದಕ್ಕೆ ಪ್ರತಿಯಾಗಿ ರಾಮಕೃಷ್ಣ ಹೆಗಡೆ:ನನ್ನ ಚಿಕಿತ್ಸೆಯ ವೆಚ್ಚಕ್ಕೆ ಹಣವಿಲ್ಲ.ಹೀಗಾಗಿ ಊರಿನಲ್ಲಿರುವ ನಮ್ಮ ತೋಟವನ್ನು ಮಾರುವ ಕುರಿತಂತೆ ವಕೀಲರ ಜತೆ ಚರ್ಚಿಸುತ್ತಿದ್ದೆ ಎಂದು ಹೇಳಿದರು.

ಈ ಮಾತು ಕೇಳಿದ ಎಸ್.ಎಂ.ಕೃಷ್ಣ,ಸಧ್ಯಕ್ಕೆ ತೋಟ ಮಾರುವ ವಿಚಾರವನ್ನು ಮುಂದೂಡಿ.ಅದನ್ನು ಆನಂತರ ನೋಡಿಕೊಂಡರಾಯಿತು.ಆಸ್ಪತ್ರೆಯ ಚಿಕಿತ್ಸಾ ವೆಚ್ಚದ ಭಾರವನ್ನು ಭರಿಸುವ ಹೊಣೆಗಾರಿಕೆ ನನ್ನ ಮೇಲಿರಲಿ ಎಂದರು.ಇದಾದ ನಂತರ ರಾಜ್ಯ ಸರ್ಕಾರವೇ ಹೆಗಡೆ ಅವರ ಚಿಕಿತ್ಸಾ ವೆಚ್ಚವನ್ನು ಭರಿಸುವ ತೀರ್ಮಾನ ತೆಗೆದುಕೊಂಡಿತು.

ಈ ಮಧ್ಯೆ ಕೃಷ್ಣ,ತಮಗೆ ಪರಮಾಪ್ತರಾದ ಹಿರಿಯ ಅಧಿಕಾರಿಯೊಬ್ಬರನ್ನು ಕರೆಸಿ ಮಾತನಾಡಿದರು."ಅಲ್ಲ,ಹೆಗಡೆಯವರು ಮದ್ಯದ ದೊರೆಗಳಿಗೆ ಬಹಳ ಆತ್ಮೀಯರು ಅಂತ ಹಲವರು ಹೇಳುತ್ತಾರೆ.ಹಾಗೇನಾದರೂ ಆಗಿದ್ದರೆ ಇವತ್ತು ತಮ್ಮ ಚಿಕಿತ್ಸಾ ವೆಚ್ಚಕ್ಕಾಗಿ ಅಂತ ಹೆಗಡೆಯವರು ತೋಟ ಮಾರುವ ಯೋಚನೆ ಯಾಕೆ ಮಾಡಬೇಕಿತ್ತು?"ಅಂತ ಪ್ರಶ್ನಿಸಿದರು.

ಅದಕ್ಕೆ ಆ ಅಧಿಕಾರಿ,"ಉನ್ನತ ಜಾಗದಲ್ಲಿದ್ದವರಿಗೆ ಇಂತವರು ಕ್ಲೋಸು,ಅಂತವರು ಕ್ಲೋಸು ಅಂತ ಹೇಳುವುದು ಸಹಜ.ಬಂಗಾರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಬೆಂಗಳೂರಿನ ಆಯಕಟ್ಟಿನ ಜಾಗಗಳಲ್ಲಿರುವ ಹೋಟೆಲ್ಲುಗಳು,ಸಿನಿಮಾ ಥಿಯೇಟರುಗಳನ್ನೆಲ್ಲ ಖರೀದಿಸಿದ್ದಾರೆ ಅಂತ ಜನ ಮಾತನಾಡಿಕೊಳ್ಳುತ್ತಿದ್ದರು.ಆದರೆ ವಾಸ್ತವ ಸ್ಥಿತಿ ಬೇರೆಯೇ ಇತ್ತು.ಈಗ ಬಂಗಾರಪ್ಪ ಅವರು ಆರ್ಥಿಕವಾಗಿ ಎಷ್ಟು ಕಷ್ಟದಲಿದ್ದಾರೆ?ಎಂಬುದು ಅವರನ್ನು ಬಲ್ಲವರಿಗಷ್ಟೇ ಗೊತ್ತು.ಹೆಗಡೆ ಅವರ ವಿಷಯವೂ ಅಷ್ಟೇ ಸಾರ್ ಎಂದರು.

ಮುಂದುವರಿದು ಮಾತನಾಡಿ,ಮದ್ಯದ ದೊರೆಗಳೇ ಇರಬಹುದು.ಯಾವುದೇ ಕೈಗಾರಿಕೋದ್ಯಮಿ ಇರಬಹುದು.ನೂರು ರೂಪಾಯಿ ಲಾಭವಾಗಬೇಕು ಎಂದಾಗ ಒಂದು ರೂಪಾಯಿ,ಎರಡು ರೂಪಾಯಿ ಖರ್ಚು ಮಾಡುತ್ತಾರೆ.ಇದನ್ನು ನೋಡಿದವರು ಇಂತಹ ರಾಜಕಾರಣಿಗೆ ಉದ್ಯಮಿಗಳು ಬಹಳ ಹಣ ಕೊಡುತ್ತಾರೆ ಅಂತ ಮಾತನಾಡಿಕೊಳ್ಳುತ್ತಾರೆ.ಆದರೆ ವಾಸ್ತವದಲ್ಲಿ ಹಾಗಿರುವುದಿಲ್ಲ.ರಾಜಕಾರಣಿಗಳನ್ನು ಹಿಡಿದುಕೊಂಡು ಕೆಲಸ ಮಾಡಿಸಿಕೊಳ್ಳುವ ತನಕ ಪುಲು ಪುಲು ಅನ್ನುತ್ತಾ ತಿರುಗಾಡುವ ಉದ್ಯಮಿಗಳು ತಮ್ಮ ಕೆಲಸವಾದ ನಂತರ ತಿರುಗಿಯೂ ನೋಡುವುದಿಲ್ಲ ಎಂದರು.

ಈ ಚರ್ಚೆ ನಡೆದ ಕೆಲವೇ ದಿನಗಳಲ್ಲಿ ಪಾನೀಯ ನಿಗಮ ಅಸ್ತಿತ್ವಕ್ಕೆ ಬಂತು.ಅಲ್ಲಿಯ ತನಕ ಮದ್ಯ ಉತ್ಪಾದಕರು ನೇರವಾಗಿ ಮದ್ಯವನ್ನು ಹೋಲ್‌ಸೇಲ್ ಮಾರಾಟಗಾರರಿಗೆ ಸರಬರಾಜು ಮಾಡುತ್ತಿದ್ದರು.ಅವರು ಉತ್ಪಾದಿಸುತ್ತಿದ್ದ ಮದ್ಯದ ಪೈಕಿ ಒಂದು ಭಾಗವಷ್ಟೇ ತೆರಿಗೆ ವ್ಯಾಪ್ತಿಗೆ ಸೇರುತ್ತಿತ್ತು.ಉಳಿದಿದ್ದು ಸೆಕೆಂಡ್ಸ್,ಥರ್ಡ್ಸ್ ರೂಪದಲ್ಲಿ ಮಾರಾಟವಾಗುತ್ತಿತ್ತು.

ಹೀಗೆ ಸೆಕೆಂಡ್ಸ್,ಥರ್ಡ್ಸ್ ರೂಪದಲ್ಲಿ ಮಾರಾಟವಾಗುತ್ತಿದ್ದ ಮದ್ಯದ ಮೂಲಕ ಬರುತ್ತಿದ್ದ ಲಾಭದ ಪೈಕಿ ಒಂದು ಪಾಲು ರಾಜಕಾರಣಿಗಳಿಗೆ,ಅಧಿಕಾರಿಗಳಿಗೆ ಕಾಣಿಕೆಯ ರೂಪದಲ್ಲಿ ರವಾನೆಯಾಗುತ್ತಿತ್ತು.ಆದರೆ ಕೊಡುವ ಕಾಣಿಕೆಗಿಂತ ಮದ್ಯದ ದೊರೆಗಳು ಬೆಳೆಸುವ ಹುಂಡಿಯ ಗಾತ್ರ ದೊಡ್ಡದಿರುತ್ತಿತ್ತು.

ಯಾವಾಗ ಎಸ್.ಎಂ.ಕೃಷ್ಣ ಪಾನೀಯ ನಿಗಮವನ್ನು ಸ್ಥಾಪಿಸಿದರೋ?ಇದಾದ ನಂತರ ಮದ್ಯದ ದೊರೆಗಳ ದರ್ಬಾರಿಗೆ ಕಡಿವಾಣ ಬಿತ್ತು.ಅಲ್ಲಿಂದ ಮುಂದೆ ಡಿಸ್ಟಿಲರಿಗಳಲ್ಲಿ ಉತ್ಪಾದನೆಯಾಗುತ್ತಿದ್ದ ಮದ್ಯವನ್ನು ಸರ್ಕಾರಿ ಸ್ವಾಮ್ಯದ ಎಂಎಸ್ಐಎಲ್‌ಗೆ ಒಪ್ಪಿಸಬೇಕಾಯಿತು.ಆ ಮೂಲಕ ಹೋಲ್‌ಸೇಲ್,ರೀಟೆಲ್ ಮಾರಾಟಗಾರರಿಗೆ ಮದ್ಯ ಸರಬರಾಜಾಗುವ ಪದ್ಧತಿ ಜಾರಿಗೆ ಬಂತು.

ಇದಾದ ನಂತರ ಇದ್ದಕ್ಕಿದ್ದಂತೆ ಸರ್ಕಾರಕ್ಕೆ ಹರಿದು ಬರುತ್ತಿದ್ದ ಅಬಕಾರಿ ಬಾಬ್ತಿನ ಆದಾಯದ ಪ್ರಮಾಣ ಆರು ಸಾವಿರ ಕೋಟಿ ರೂಗಳಿಗೇರಿತು.ಈಗ ಈ ಪ್ರಮಾಣ ಸುಮಾರು ಹನ್ನೊಂದು ಸಾವಿರ ಕೋಟಿ ರೂಗಳಷ್ಟಿದೆ.ಅಂದ ಹಾಗೆ ಅವತ್ತು ಎಸ್.ಎಂ.ಕೃಷ್ಣ ಪಾನೀಯ ನಿಗಮವನ್ನು ಸ್ಥಾಪನೆ ಮಾಡಲು ಹೊರಟಾಗ ಮದ್ಯದ ದೊರೆಗಳು ದೊಡ್ಡ ಮಟ್ಟದ ಒತ್ತಡವನ್ನೇ ತಂದರು.

ಆದರೂ ಎಸ್.ಎಂ.ಕೃಷ್ಣ ಅದಕ್ಕೆ ತಲೆ ಬಾಗಲಿಲ್ಲ.ಆ ಸಂದರ್ಭದಲ್ಲಿ ಹೈಕಮಾಂಡ್ ಕೃಪಾಕಟಾಕ್ಷ ದೊಡ್ಡ ಮಟ್ಟದಲ್ಲೇ ಅವರ ಮೇಲಿತ್ತು.ಹೀಗಾಗಿ ಮದ್ಯದ ದೊರೆಗಳು ದಿಲ್ಲಿ ಮಟ್ಟದಲ್ಲಿ ಲಾಬಿ ಮಾಡಿದರೂ ಪ್ರಯೋಜನವಾಗಲಿಲ್ಲ.

ಇದನ್ನೇಕೆ ನೆನೆಪಿಸಿಕೊಳ್ಳಬೇಕೆಂದರೆ ಇವತ್ತು ಮುಖ್ಯಮಂತ್ರಿ ಸಿದ್ಧರಾಮಯ್ಯ ರಾಜ್ಯದ ಹಿತಕ್ಕೆ ಸಂಬಂಧಿಸಿದ ಹಲವು ವಿಷಯಗಳಲ್ಲಿ ನಿರ್ಣಾಯಕ ತೀರ್ಮಾನ ಕೈಗೊಳ್ಳುತ್ತಿದ್ದಾರೆ.ರಾಜ್ಯದಲ್ಲಿ ಕೈಗಾರಿಕೆಯನ್ನು ಸ್ಥಾಪಿಸುವ ಸಲುವಾಗಿ ಪಡೆಯುವ ಒಂದು ಎಕರೆ ಭೂಮಿಗೆ ಪ್ರತಿಯಾಗಿ ಒಂದು ಸಾವಿರ ಮಂದಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಬೇಕು ಎಂಬುದರಿಂದ ಹಿಡಿದು,ಕರ್ನಾಟಕದಲ್ಲಿ ಸ್ಥಾಪನೆಯಾಗುವ ಕೈಗಾರಿಕೆಗಳಲ್ಲಿ ಕನ್ನಡಿಗರಿಗೇ ಹೆಚ್ಚಿನ ಉದ್ಯೋಗಾವಕಾಶ ಸಿಗಬೇಕು ಎನ್ನುವ ತನಕ ಹಲವು ಮಹತ್ವದ ವಿಷಯಗಳ ಕುರಿತು ತಮ್ಮ ಇಚ್ಚಾಶಕ್ತಿಯನ್ನು ಪ್ರದರ್ಶಿಸುತ್ತಿದ್ದಾರೆ.

ನಿಜಕ್ಕೂ ಇದು ಜಾರಿಗೆ ಬಂದರೆ ಕರ್ನಾಟಕದ ಚಿತ್ರವೇ ಬದಲಾಗಿ ಹೋಗುತ್ತದೆ.ಅಂದ ಹಾಗೆ ಮೊನ್ನೆ ಮೊನ್ನೆಯ ತನಕ ಕೈಗಾರಿಕೆಗಳನ್ನು ಸ್ಥಾಪಿಸುವ ನೆಪದಲ್ಲಿ ಭೂಮಿ ಪಡೆದ ಬಹುತೇಕರು ರಿಯಲ್ ಎಸ್ಟೇಟ್ ಧಂದೆ ನಡೆಸಿದರು ಎಂಬುದು ರಹಸ್ಯವೇನಲ್ಲ.ಆದರೆ ಇನ್ನು ಮುಂದೆ ಪಡೆಯುವ ಒಂದು ಎಕರೆ ಜಾಗಕ್ಕೆ ಪ್ರತಿಯಾಗಿ ಒಂದು ಸಾವಿರ ಮಂದಿಗೆ ಉದ್ಯೋಗ ಸೃಷ್ಟಿಸುವುದು ಅನಿವಾರ್ಯವಾದರೆ ನಿಜವಾದ ಕೈಗಾರಿಕೋದ್ಯಮಿ ಮಾತ್ರ ಭೂಮಿ ಪಡೆಯಲು ಮುಂದಾಗುತ್ತಾನೆ.

ಆ ಮೂಲಕ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಲಭ್ಯವಾಗುತ್ತದೆ.ಅದೇ ರೀತಿ ಸರೋಜಿನಿ ಮಹಿಷಿ ವರದಿಯ ಶಿಫಾರಸಿನ ಪ್ರಕಾರ,ಕರ್ನಾಟಕದಲ್ಲಿ ಸ್ಥಾಪನೆಯಾಗುವ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗಾವಕಾಶ ಲಭ್ಯವಾದರೆ ಅದು ಕೂಡಾ ಒಂದು ಕ್ರಾಂತಿಯೇ ಆಗುತ್ತದೆ.

ಅಂದ ಹಾಗೆ ಈ ಮಧ್ಯೆ ಸಿಎಂ ಸಿದ್ಧರಾಮಯ್ಯ ಗಮನ ಹರಿಸಬೇಕಾದ ಬಹುಮುಖ್ಯ ಸಂಗತಿ ಇನ್ನೊಂದಿದೆ.ಅದೆಂದರೆ ರಾಜ್ಯದಲ್ಲಿ ನಡೆಯುತ್ತಿರುವ ಗಣಿಗಾರಿಕೆಯ ಮೇಲೆ ಸರ್ಕಾರವೇ ಏಕಸ್ವಾಮ್ಯ ಸಾಧಿಸುವುದು

.ಕಳೆದ ಒಂದು ದಶಕದ ಅವಧಿಯಲ್ಲಿ ಕೆಲವೇ ಕೆಲವು ಮಂದಿ ಕೋಟ್ಯಾಂತರ ಟನ್‌ಗಳಷ್ಟು ಕಬ್ಬಿಣದ ಅದಿರನ್ನು ಹೇಗೆ ತೆಗೆದರು?ಹೇಗೆ ಮಾರಾಟ ಮಾಡಿದರು?ಆ ಹಣದ ಮೂಲಕ ಕರ್ನಾಟಕದ ರಾಜಕೀಯ ಚಿತ್ರವನ್ನು ಎಷ್ಟು ಗಲೀಜು ಮಾಡಿದರು?ಎಂಬುದು ಎಲ್ಲರಿಗೂ ಗೊತ್ತು.

ಗಮನಿಸಬೇಕಾದ ಸಂಗತಿ ಎಂದರೆ ಸುಪ್ರೀಂಕೋರ್ಟ್ ಮಧ್ಯೆ ಪ್ರವೇಶಿಸಿ,ಗಣಿಗಾರಿಕೆಯ ಮೂಲಕ ತೆಗೆಯುವ ಕಬ್ಬಿಣದ ಅದಿರನ್ನು ಕೇಂದ್ರ ಸರ್ಕಾರಿ ಸ್ವಾಮ್ಯದ ಎನ್.ಎಂ.ಡಿ.ಸಿ,(ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮ)ಮೂಲಕವೇ ಮಾರಾಟ ಮಾಡಬೇಕು.ಹೀಗೆ ಮಾರಾಟ ಮಾಡಿದ ಅದಿರಿಗೆ ಪ್ರತಿಯಾಗಿ ಬರುವ ಹಣದ ಒಂದು ಪಾಲು ಸರ್ಕಾರಕ್ಕೆ ಸಲ್ಲಬೇಕು ಎಂದು ಹೇಳುವ ತನಕ ನಮ್ಮ ಸರ್ಕಾರಕ್ಕೆ ಜುಜುಬಿ ಅನ್ನುವಷ್ಟು ಪ್ರಮಾಣದ ತೆರಿಗೆ ಸಂದಾಯವಾಗುತ್ತಿತ್ತು.

ಆದರೆ ಸುಪ್ರೀಂಕೋರ್ಟ್ ಮಧ್ಯೆ ಪ್ರವೇಶಿಸಿದ ಮೇಲೆ ಈ ವಿಷಯದಲ್ಲಿ ರಾಜ್ಯದ ಬೊಕ್ಕಸಕ್ಕೆ ಲಾಭವಾಗಿದೆ.ಇಷ್ಟಾದರೂ ರಾಜ್ಯದ ಸಂಪತ್ತನ್ನು ಕೆಲವೇ ಖಾಸಗಿ ವ್ಯಕ್ತಿಗಳ ವಶಕ್ಕೆ ಕೊಟ್ಟು ಅದರಲ್ಲಿ ಒಂದು ಪಾಲನ್ನು ಪಡೆಯುವುದಕ್ಕಿಂತ ಇಡೀ ಗಣಿಗಾರಿಕೆಯ ಮೇಲೆ ಏಕಸ್ವಾಮ್ಯ ಸಾಧಿಸುವ ಮೂಲಕ ರಾಜ್ಯದ ಸಂಪತ್ತು ಸಾರಾಸಗಟಾಗಿ ಬೊಕ್ಕಸಕ್ಕೇ ಹರಿದು ಬರುವಂತೆ ನೋಡಿಕೊಳ್ಳುವುದು ಉತ್ತಮ.

ಈಗಾಗಲೇ ಸುಪ್ರೀಂಕೋರ್ಟ್  ಸಿ ಕೆಟಗರಿಯ ಅಡಿ ಬರುವ ಐವತ್ತೊಂದು ಗಣಿ ಕಂಪನಿಗಳಿಗೆ ನೀಡಿದ ಅನುಮತಿಯನ್ನು ರದ್ದುಗೊಳಿಸಿ,ಈ ಗಣಿಗಳನ್ನು ಹರಾಜು ಮಾಡುವಂತೆ ಸೂಚಿಸಿದೆ.ಅಂದ ಹಾಗೆ ಈ ಹಿಂದೆ ಗಣಿಗಾರಿಕೆಗೆ ಅನುಮತಿ ಪಡೆದು ಇದಕ್ಕಾಗಿ ದೊಡ್ಡ ಪ್ರಮಾಣದ ಬಂಡವಾಳ ಹೂಡಿದ ಕೆಲವರಿಗೆ ಮರಳಿ ಒಂದು ಅವಕಾಶ ನೀಡುವುದು ನ್ಯಾಯವಾದರೂ ಉಳಿದಂತೆ ಗಣಿಗಾರಿಕೆಯ ಮೇಲೆ ಏಕಸ್ವಾಮ್ಯ ಸಾಧಿಸುವ ದಿಸೆಯಲ್ಲಿ ಸರ್ಕಾರ ದಿಟ್ಟ ಹೆಜ್ಜೆ ಇಡುವುದು ಸೂಕ್ತ.

ಅದಕ್ಕೂ ಮುನ್ನ ಈಗಿರುವ ಸರ್ಕಾರಿ ಸ್ವಾಮ್ಯದ ಮೈಸೂರು ಮಿನರಲ್ಸ್ ಲಿಮಿಟೆಡ್ ಅನ್ನು ರದ್ದುಗೊಳಿಸಿ ಹೊಸ ಸ್ವರೂಪದ,ನಿಖರ ಉದ್ದೇಶ ಹೊಂದಿರುವ ಸಂಸ್ಥೆಯನ್ನು ಪ್ರಾರಂಭಿಸಿ ಗಣಿಗಾರಿಕೆಯ ಮೂಲಕ ರಾಜ್ಯದ ಬೊಕ್ಕಸಕ್ಕೆ ದೊಡ್ಡ ಪ್ರಮಾಣದ ಹಣ ಹರಿದು ಬರುವಂತೆ ಮಾಡುವ ಕೆಲಸವಾಗಬೇಕು.

ಇವತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರತಿ ಟನ್ ಕಬ್ಬಿಣದ ಅದಿರಿಗೆ ಸುಮಾರು ಎಂಟು ಸಾವಿರ ರೂಪಾಯಿಗಳಷ್ಟು ಮೌಲ್ಯವಿದೆ.ಈ ಪ್ರಮಾಣದ ಹಣ ಸರ್ಕಾರದ ಬೊಕ್ಕಸಕ್ಕೇ ಹರಿದು ಬಂದರೆ ರಾಜ್ಯದ ಆರ್ಥಿಕ ಶಕ್ತಿಯನ್ನು ಹೆಚ್ಚಿಸುವ ಹಲವು ಯೋಜನೆಗಳ ಮೇಲೆ ಬಂಡವಾಳ ಹೂಡುವುದು ಸುಲಭವಾಗುತ್ತದೆ.

ಈಗಾಗಲೇ ರಾಜ್ಯದ ಅಭಿವೃದ್ಧಿಯ ಹೆಸರಿನಲ್ಲಿ ಸರ್ಕಾರ ಮಾಡಿದ ಸಾಲದ ಪ್ರಮಾಣ ಒಂದು ಲಕ್ಷದ ಇಪ್ಪತ್ಮೂರು ಸಾವಿರ ಕೋಟಿ ರೂಗಳಿಗೆ ತಲುಪಿದೆ.ಒಂದು ಸಲ ಗಣಿಗಾರಿಕೆಯ ಮೇಲೆ ಏಕಸ್ವಾಮ್ಯ ಸಾಧಿಸಿದರೆ ಮಾಡಿರುವ ಸಾಲವನ್ನು ತೀರಿಸಲು ಸಾಧ್ಯವಾಗುತ್ತದಷ್ಟೇ ಅಲ್ಲ,ಅತ್ಯುತ್ತಮ ಆರ್ಥಿಕ ಶಕ್ತಿ ಇರುವ ರಾಜ್ಯಗಳ ಪೈಕಿ ಕರ್ನಾಟಕ ನಂಬರ್ ಒನ್ ಆಗಲು ಸಾಧ್ಯವಾಗುತ್ತದೆ.

ಈ ವಿಷಯದಲ್ಲಿ ಸಿದ್ಧರಾಮಯ್ಯ ಇಚ್ಚಾಶಕ್ತಿ ತೋರಿಸುತ್ತಾರಾ?ಕಾದು ನೋಡಬೇಕು.

ಆರ್.ಟಿ.ವಿಠ್ಠಲಮೂರ್ತಿ